ಮುಳಬಾಗಿಲು ಮೋಟೆಲ್ ಪ್ರಾರಂಭ ಮಾಡುವ ಬಗ್ಗೆ

1080 (1250) ಶ್ರೀ ಎಂ. ವಿ. ವೆಂಕಟಪ್ಪ (ಮುಳಬಾಗಿಲು) : ಮಾನ್ಯ ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು ಈ ಕಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮುಳಬಾಗಿಲು ಟೌನಿನಲ್ಲಿ ಪ್ರವಾಸಿಗಳಿಗೆ ಅನುಕೂಲವಾಗಲು ಕಟ್ಟರುವ ಮೋಟೆಲ್‌ಗೆ ತಗಲಿರುವ ವಚ್ಚವೆಷ್ಟು ;

ಆ) ಸದರಿ ಮೋಟೆಲ್‌ನ್ನು ನಿರ್ಮಿಸಿ ಸುಮಾರು ಎರಡು ವರ್ಷವಾದರೂ ಇನ್ನೂ ಪ್ರಾರಂಭ ಮಾಡಲು ಕಾರಣವೇನು ;

ಇ) ಮೋಟೆಲ್‌ನಲ್ಲಿರುವ ಸೌಲಭ್ಯಗಳೇನು ;

ಶ್ರೀ ಕೆ. ಶಿವಮೂರ್ತಿ (ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು) :

ಅ) ರೂ. 27.06 ಲಕ್ಷ

ಆ) ಈ ಸೌಲಭ್ಯದ ನಿರ್ಮಾಣವು ಪೂರ್ಣಗೊಂಡು ಆಗಸ್ಟ್ 1991 ರಲ್ಲಿ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿರ್ವಹಣೆಗಾಗಿ ವಹಿಸಿಕೊಡಲಾಗಿದೆ. ಈ ಸೌಲಭ್ಯವನ್ನು ರೂ. 9.50 ಲಕ್ಷ ವೆಚ್ಚದಲ್ಲಿ ಸಜ್ಜುಗೊಳಿಸಲು ಫೆಬ್ರವರಿ 92ರಲ್ಲಿ ಮಂಜೂರಾತಿ ನೀಡಲಾಗಿದೆ. ಈ ಸೌಲಭ್ಯವನ್ನು ಸಜ್ಜುಗೊಳಿಸಿದ ಕೂಡಲೆ ಪ್ರಾರಂಭಿಸಲಾಗುವುದು.

ಇ) ಈ ಮೋಟೆಲ್‌ನಲ್ಲಿ ಒಟ್ಟು 12 ಕೊಠಡಿಗಳು ಅಡಿಗೆ ಕೋಣೆ, ಭೋಜನ ಶಾಲೆ, ಶೌಚಾಲಯ ಸೌಲಭ್ಯಗಳಿರುತ್ತವೆ.

ನೆಲಮಂಗಲ ಕ್ಷೇತ್ರದಲ್ಲಿ ಯುವಜನ ಸಂಸ್ಥೆಗಳ ಸಂಖ್ಯೆ

1084 (1400) ಶ್ರೀ ಅಂಜನ ಮೂರ್ತಿ (ನೆಲಮಂಗಲ) ಮಾನ್ಯ ಯುವಜನ ಸೇವಾ ಮತ್ತು ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1) ನೆಲಮಂಗಲ ಮತ ಕ್ಷೇತ್ರದಲ್ಲಿ ಯುವಜನ ಸೇವೆಗೆ ಸೇರಿದ ಎಷ್ಟು ಸಂಸ್ಥೆಗಳಿವೆ; (ಹೋಬಳಿ ಗ್ರಾಮ ಹಾಗೂ ಪೂರ್ಣ ವಿಳಾಸಗಳ ಮಾಹಿತಿ ನೀಡುವುದು.)

2) ಅವುಗಳ ಉತ್ತಮ ಕಾರ್ಯ ಚಟುವಟಿಕೆಗಳಿಗೆ 1990-91 ರಲ್ಲಿ ಸರ್ಕಾರ ಎಷ್ಟು ಹಣ ಬಿಡುಗಡೆ ಮಾಡಿದೆ (ಪೂರ್ಣ ಮಾಹಿತಿ ನೀಡುವುದು) (ಮಹಿಳೆಯು ಹಾಗೂ ಯುವಕರಿಗೆ ಸೇರಿದ ಸಂಸ್ಥೆಗಳ ಹೆಸರುಗಳ ವಿವರ ನೀಡುವುದು.)

ಶ್ರೀ ಎಸ್. ರಮೇಶ್ (ಯುವಜನ ಸೇವಾ ಮತ್ತು ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು) :

1. ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಗೆ ಸೇರಿದ ಯಾವುದೇ ಸಂಸ್ಥೆಗಳು ಇರುವುದಿಲ್ಲ.

2. ಉದ್ಭವಿಸುವುದಿಲ್ಲ.